ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	373
ಮಾನ್ಯ ಸದಸ್ಯರ ಹೆಸರು	ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	18.02.2022
ಉತ್ತರಿಸುವ ಸಚಿವರು	ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಲಾಖಾ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿ ನಿಲಯಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಮತ್ತು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ನಿಲಯಗಳ ಸಂಖ್ಯೆ ಎಷ್ಟು; ವಾರ್ಷಿಕ ಬಾಡಿಗೆ ಮೊತ್ತವೆಷ್ಟು; ಸ್ವಂತ ನಿವೇಶನವನ್ನು ಹೊಂದಿ ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ನಿಲಯಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)	ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾವತಿಯಿಂದ ಕಾರ್ಯನಿರ್ವಹಿಸುತ್ತಿರುವ ಬಾಲಕರ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳು, ಕಟ್ಟಡದ ವಿವರ, ವಾರ್ಷಿಕ ಪಾವತಿಸುತ್ತಿರುವ ಬಾಡಿಗೆ ಹಾಗೂ ಸ್ವಂತ ನಿವೇಶನ ಹೊಂದಿ ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯಗಳ ವಿವರ ಕೆಳಕಂಡಂತಿದೆ. (ಕೆಳಗಿನ ಕೋಷ್ಟಕ 1) ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿಯನ್ನು ಅನುಬಂಧ-1ರಲ್ಲಿನೀಡಲಾಗಿದೆ.
ಆ)	ಈ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿ ನಿಲಯಗಳ ವಾಸ್ತವ್ಯದ ಗರಿಷ್ಠ ಸಾಮರ್ಥ್ಯ ಎಷ್ಟು; ಪ್ರಸ್ತುತ ಇರುವ ವಿದ್ಯಾರ್ಥಿ ಮತ್ತು ವಿದ್ಯಾರ್ಥೀನಿಯರ ಸಂಖ್ಯೆ ಎಷ್ಟು; ಮಿತಿಗಿಂತ ಹೆಚ್ಚಿನ ಪ್ರವೇಶದಿಂದ ಮೂಲ ಸೌಕರ್ಯದ ಕೊರತೆಯಾಗಿರುವುದನ್ನು ಸರ್ಕಾರ ಗಮನಿಸಿದೆಯೇ; (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)	ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ವತಿಯಿಂದ ಕಾರ್ಯನಿರ್ವಹಿಸುತ್ತಿರುವ ಬಾಲಕರ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿನ ವಾಸ್ತವ್ಯದ ಗರಿಷ್ಠ ಸಾಮರ್ಥ್ಯ ಹಾಗೂ ಪ್ರಸ್ತುತ ವಾಸ್ತವ್ಯ ಇರುವ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ಸಂಖ್ಯೆ ಈ ಕೆಳಕಂಡಂತಿವೆ. (ಕೆಳಗಿನ ಕೋಷ್ಟಕ 2) ಮುಂದುವರೆದು, ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿನ ವಿದ್ಯಾರ್ಥಿನಿಲಯಗಳಲ್ಲಿ ವಾಸ್ತವ್ಯದ ಗರಿಷ್ಠ ಸಾಮರ್ಥ್ಯಕ್ಕಿಂತ ಹೆಚ್ಚಿನ ಪ್ರವೇಶ ಇಲ್ಲದಿರುವುದರಿಂದ, ಮೂಲಸೌಕರ್ಯದ ಕೊರತೆಯ ಪ್ರಶ್ನೆ ಉದ್ಭವಿಸುವುದಿಲ್ಲ. ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿಯನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.

ಜಿಲ್ಲೆಯ ಹೆಸರು	ನಿಲಯಗಳ ಸಂಖ್ಯೆ		ಕಟ್ಟಡದ ವಿವರ			ವಾರ್ಷಿಕ ಬಾಡಿಗೆ ಮೊತ್ತ (ರೂ.ಲಕ್ಷಗಳಲ್ಲಿ)	ಸ್ವಂತ ನಿವೇಶನ ಹೊಂದಿಬಾಡಿಗೆ ಕಟ್ಟಡದಲ್ಲಿರುವ ವಿದ್ಯಾರ್ಥಿನಿಲಯಗಳ ಸಂಖ್ಯೆ
	ಬಾಲಕ	ಬಾಲಕಿ	ಸ್ವಂತ	ಬಾಡಿಗೆ	ಉಚಿತ		
ಉಡುಪಿ	20	21	29	9	3	44.604	0
ದಕ್ಷಿಣ ಕನ್ನಡ	30	43	42	28	3	267.17	28 (9 ವಿ.ನಿ ಗಳ ಸ್ವಂತ ಕಟ್ಟಡ ನಿರ್ಮಾಣ ಪ್ರಗತಿಯಲ್ಲಿರುತ್ತದೆ.)

ಜಿಲ್ಲೆಯ ಹೆಸರು	ವಾಸ್ತವ್ಯದ ಗರಿಷ್ಠ ಸಾಮರ್ಥ್ಯ ಸಂಖ್ಯೆ (ಮಂಜೂರಾತಿ ಸಂಖ್ಯೆ)			ಪ್ರಸ್ತುತ ವಾಸ್ತವ್ಯ ಇರುವ ಸಂಖ್ಯೆ		
	ಬಾಲಕ	ಬಾಲಕಿ	ಒಟ್ಟು	ಬಾಲಕ	ಬಾಲಕಿ	ಒಟ್ಟು
ಉಡುಪಿ	1700	2045	3745	1093	1704	2797
ದಕ್ಷಿಣ ಕನ್ನಡ	2360	4000	6360	1780	2972	4752

ಇ) ಕಳೆದ ಮೂರು ವರ್ಷಗಳಲ್ಲಿ ಪ್ರವೇಶಾತಿಯನ್ನು ಕೋರಿ ಸಲ್ಲಿಸಿದ ಅರ್ಜಿಗಳ ಸಂಖ್ಯೆ ಎಷ್ಟು: ಪ್ರವೇಶಾತಿ ನೀಡಿದ ಸಂಖ್ಯೆ ಎಷ್ಟು: ಬಾಕಿಯುಳಿದ ಮಕ್ಕಳಿಗೆ ಶಿಕ್ಷಣದ ಹಕ್ಕನ್ನು ಖಾತ್ರಿ ಪಡಿಸುವ ದೃಷ್ಟಿಯಿಂದ ವಸತಿ ಮತ್ತು ಆಹಾರ ಕಲ್ಪಿಸುವ ಬಗ್ಗೆ ಸರ್ಕಾರದ ಕ್ರಮವೇನು:

ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ವಿದ್ಯಾರ್ಥಿನಿಲಯಗಳಿಗೆ 2018-19, 2019-20 ಮತ್ತು 2020-21ನೇ ಸಾಲುಗಳಲ್ಲಿ ಪ್ರವೇಶ ಕೋರಿ ಸಲ್ಲಿಸಿರುವ ಅರ್ಜಿಗಳು ಹಾಗೂ ಪ್ರವೇಶಾತಿ ನೀಡಿರುವ ವಿವರ ಕೆಳಕಂಡಂತಿದೆ.

ಜಿಲ್ಲೆಯ ಹೆಸರು	ಪ್ರವೇಶ ಕೋರಿ ಸಲ್ಲಿಸಿರುವ ಅರ್ಜಿಗಳ ಸಂಖ್ಯೆ			ಪ್ರವೇಶಾತಿ ನೀಡಿರುವ ಸಂಖ್ಯೆ		
	2018-19	2019-20	2020-21	2018-19	2019-20	2020-21
ಉಡುಪಿ	3525	3629	2672	3017	3012	2415
ದಕ್ಷಿಣ ಕನ್ನಡ	5816	6738	6034	5474	5582	4923

ಆದಾಗ್ಯೂ, ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳಲ್ಲಿ ಅರ್ಜಿ ಸಲ್ಲಿಸಿ, ಪ್ರವೇಶ ದೊರಕದ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಪರ್ಯಾಯವಾಗಿ ಅನುದಾನದ ಲಭ್ಯತೆಯನುಸಾರ ವಿದ್ಯಾಸಿರಿ ಯೋಜನೆಯಡಿ ಪ್ರತಿ ವಿದ್ಯಾರ್ಥಿಗೆ ಪ್ರತಿ ಮಾಹೆ ರೂ.1500/- ರಂತೆ ಗರಿಷ್ಠ 10 ತಿಂಗಳಿಗೆ ರೂ.15,000/- ಗಳನ್ನು ಮಂಜೂರು ಮಾಡಲಾಗುತ್ತದೆ.

ಈ) ಗ್ರಾಮೀಣ ಭಾಗದಲ್ಲಿರುವ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿ ನಿಲಯಗಳನ್ನು ಸ್ವಂತ ಕಟ್ಟಡದ ನಿಲಯಗಳನ್ನು ಮುಚ್ಚಿ ನಗರ ಭಾಗದಲ್ಲಿ ಹೊಸದಾಗಿ ಬಾಡಿಗೆ ಕಟ್ಟಡದಲ್ಲಿ ನಿಲಯಗಳನ್ನು ಪ್ರಾರಂಭಿಸುವ ಔಚಿತ್ಯವೇನು: ಅಧಿಕಾರಿಗಳ ಮತ್ತು ಸಿಬ್ಬಂದಿಗಳ ಅನುಕೂಲಕ್ಕಾಗಿ ಪಟ್ಟಣದತ್ತ ವಲಸೆಯಾಗುತ್ತಿರುವುದು ನಿಜವೇ?

ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ಸ್ವಂತ ಕಟ್ಟಡದ ನಿಲಯಗಳನ್ನು ಮುಚ್ಚಿ ನಗರ ಭಾಗದಲ್ಲಿ ಹೊಸದಾಗಿ ಬಾಡಿಗೆ ಕಟ್ಟಡದಲ್ಲಿ ಪ್ರಾರಂಭಿಸಿರುವಂತಹ ವಿದ್ಯಾರ್ಥಿನಿಲಯಗಳು ಯಾವುದೂ ಇರುವುದಿಲ್ಲ.

ಸಂಖ್ಯೆ:ಹಿಂವಕ 90 ಬಿಂಎಂಎಸ್ 2022

(ಕೋಟ ಶ್ರೀನಿವಾಸ ಪೂಜಾರಿ)
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಅನುಬಂಧ - 1

ಮಾನ್ಯ ವಿಧಾನಪರಿಷತ್ ಸದಸ್ಯರಾದ ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ.373ಕ್ಕೆ ಅನುಬಂಧ-1 ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳು, ಕಟ್ಟಡದ ವಿವರ, ವಾರ್ಷಿಕ ಬಾಡಿಗೆ ಮೊತ್ತದ ತಾಲೂಕುವಾರು ವಿವರ ಈ ಕೆಳಕಂಡಂತಿವೆ.

ಉಡುಪಿ						
ತಾಲೂಕು	ಬಾಲಕರ ವಿದ್ಯಾರ್ಥಿ ನಿಲಯ	ಬಾಲಕಿಯರ ವಿದ್ಯಾರ್ಥಿ ನಿಲಯ	ಸ್ವಂತ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವರ	ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವರ	ಉಚಿತ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವರ	ವಾರ್ಷಿಕ ಬಾಡಿಗೆ ಮೊತ್ತ (ರೂ.ಲಕ್ಷಗಳಲ್ಲಿ)
ಉಡುಪಿ	9	10	12	5	2	22.4826
ಕುಂದಾಪುರ	6	8	10	4	0	22.1214
ಕಾರ್ಕಳ	5	3	7	0	1	0.00
ಒಟ್ಟು	20	21	29	9	3	44.604

ದಕ್ಷಿಣ ಕನ್ನಡ ಜಿಲ್ಲೆ						
ತಾಲೂಕು	ಬಾಲಕರ ವಿದ್ಯಾರ್ಥಿ ನಿಲಯ	ಬಾಲಕಿಯರ ವಿದ್ಯಾರ್ಥಿ ನಿಲಯ	ಸ್ವಂತ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವರ	ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವರ	ಉಚಿತ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವರ	ವಾರ್ಷಿಕ ಬಾಡಿಗೆ ಮೊತ್ತ (ರೂ.ಲಕ್ಷಗಳಲ್ಲಿ)
ಬಂಟ್ವಾಳ	4	6	7	2	1	12 60
ಬೆಳ್ತಂಗಡಿ	6	10	8	8	0	75.76
ಮಂಗಳೂರು	14	13	15	11	1	136.32
ಪುತ್ತೂರು	3	6	4	5	0	34.91
ಸುಳ್ಯ	3	8	8	2	1	7.58
ಒಟ್ಟು	30	43	42	28	3	267.17

ಅನುಬಂಧ - ೨

ಮಾನ್ಯ ವಿಧಾನಪರಿಷತ್ ಸದಸ್ಯರಾದ ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ.373ಕ್ಕೆ ಅನುಬಂಧ-2

ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಬಾಲಕರ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿನ ವಾಸ್ತವ್ಯದ ಸಾಮರ್ಥ್ಯ ಹಾಗೂ ಪ್ರಸ್ತುತ ವಾಸ್ತವ್ಯ ಇರುವ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ವಿವರ

ಉಡುಪಿ ಜಿಲ್ಲೆ

ಜಿಲ್ಲೆಯ ಹೆಸರು	ವಾಸ್ತವ್ಯದ ಗರಿಷ್ಠ ಸಾಮರ್ಥ್ಯ ಸಂಖ್ಯೆ (ಮಂಜೂರಾತಿ ಸಂಖ್ಯೆ)			ಪ್ರಸ್ತುತ ವಾಸ್ತವ್ಯ ಇರುವ ಸಂಖ್ಯೆ		
	ಬಾಲಕ	ಬಾಲಕಿ	ಒಟ್ಟು	ಬಾಲಕ	ಬಾಲಕಿ	ಒಟ್ಟು
ಉಡುಪಿ	905	970	1875	588	881	1469
ಕುಂದಾಪುರ	435	775	1210	328	677	1005
ಕಾರ್ಕಳ	360	300	660	177	146	323
ಒಟ್ಟು	**1700**	**2045**	**3745**	**1093**	**1704**	**2797**

ದಕ್ಷಿಣ ಕನ್ನಡ ಜಿಲ್ಲೆ

ಜಿಲ್ಲೆಯ ಹೆಸರು	ವಾಸ್ತವ್ಯದ ಗರಿಷ್ಠ ಸಾಮರ್ಥ್ಯ ಸಂಖ್ಯೆ (ಮಂಜೂರಾತಿ ಸಂಖ್ಯೆ)			ಪ್ರಸ್ತುತ ವಾಸ್ತವ್ಯ ಇರುವ ಸಂಖ್ಯೆ		
	ಬಾಲಕ	ಬಾಲಕಿ	ಒಟ್ಟು	ಬಾಲಕ	ಬಾಲಕಿ	ಒಟ್ಟು
ಬಂಟ್ವಾಳ	260	535	795	189	346	535
ಬೆಳ್ತಂಗಡಿ	445	895	1340	330	627	957
ಮಂಗಳೂರು	1155	1320	2475	919	1129	2048
ಪುತ್ತೂರು	260	560	820	153	421	574
ಸುಳ್ಯ	240	690	930	189	449	638
ಒಟ್ಟು	**2360**	**4000**	**6360**	**1780**	**2972**	**4752**

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.